# ಮಾಸ ಭವಿಷ್ಯ

ಅರುಣ ಪಿ. ಭಟ್



**ಮೇಷ:** ತಿಂಗಳ ಆರಂಭದಲ್ಲಿ ಕಾರ್ಯಸಿದ್ಧಿ, ಧನಲಾಭ. ಬಂಧುಗಳ ಆಗಮನದಿಂದ ಸಂತಸ. ಗ್ರಂಥರಚನೆಯಲ್ಲಿ ಆಸಕ್ತಿ. ವಾಹನ ಸೌಖ್ಯ.ಮಕ್ಕಳಿಂದ ಮಾನಸಿಕ ಕಿರಿಕಿರಿ. ಬರತಕ್ಕ ಬಾಕಿ ಬರುವುದು. ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು. ಅವಿವಾಹಿತರಿಗೆ ವಿವಾಹ ಯೋಗ. ಶುಭ: 06,18,22 ಅಶುಭ: 10,15,25.



**ವೃಷಭ:** ತಿಂಗಳ ಆರಂಭದಲ್ಲಿ ಪ್ರವಾಸ, ಸಹೋದರಿಯರಿಂದ ಶುಭವಾರ್ತೆ, ಗೃಹಾಲಂಕಾರ ವಸ್ತು ಖರೀದಿ. ತಿಂಗಳ ಮಧ್ಯದಲ್ಲಿ ಆರೋಗ್ಯ ಸಂಬಂಧಿ ಖರ್ಚು. ಅವಮಾನಕರ ಪ್ರಸಂಗ ಎದುರಾಗಬಹುದು, ತಾಳ್ಮೆ ಕಳೆದುಕೊಳ್ಳಬೇಡಿ. ಕೋರ್ಟ್ ಪ್ರಕಣಗಳಿದ್ದಲ್ಲಿ ಗೆಲುವು ನಿಮ್ಮ ಪರವಾಗಿಯೇ ಆಗುವುದು. ಶುಭ: 12,20,29 ಅಶುಭ: 11,21,25.



**ಮಿಥುನ:** ದೈಹಿಕ ಜಾಡ್ಯ, ವಿನಾಕಾರಣ ಹೆದರಿಕೆ, ಅಸಮಾಧಾನ. ಇದರ ನಡುವೆಯೇ ಬಹುದಿನಗಳ ನಂತರ ಕುಟುಂಬದಲ್ಲಿ ಸಂತೋಷ ಕೂಟ ನಡೆಯುವುದು. ಕಲಾವಿದರು ಮತ್ತು ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಯಶಸ್ಸು. ಮಾನ–ಸನ್ಮಾನ. ಆರೋಗ್ಯದ ಬಗ್ಗೆ ಎಚ್ಚರಿಕೆ ಇರಲಿ. ಶುಭ:14,19,22 ಅಶುಭ: 12,17,23.



**ಕರ್ಕ:** ಮನೆಕಟ್ಟುವ ಸಮಸ್ಯೆ ಬಗೆಹರಿಯುವುದು. ಕ್ರಯ ವಿಕ್ರಯದಲ್ಲಿ ವಂಚನೆ ನಡೆಯುವ ಸಂಭವ, ವಿವಾದ ಸಾಧ್ಯತೆ, ಮಾಡುವ ಕೆಲಸದಲ್ಲಿ ಜಾಗ್ರತೆ ಇರಲಿ. ತಂದೆಯಿಂದ ಹಣಕಾಸಿನ ಸಹಾಯ ಸಿಗಬಹುದು. ಕಾಲಿಗೆ ನೋವು, ಆಸ್ಪತ್ರೆಗೆ ಖರ್ಚು. ನಿರೀಕ್ಷಿತ ಸ್ಪರ್ಧೆಯಲ್ಲಿ ಯಶಸ್ಸು. ಶುಭ: 08,16,24 ಅಶುಭ: 12,18,26.



**ಸಿಂಹ:** ಶಾರೀರಿಕ ಹಾಗೂ ಮಾನಸಿಕ ಉತ್ಸಾಹ ವೃದ್ಧಿಸುವುದು. ಸರಕಾರಿ ಕೆಲಸಗಳು ತ್ವರಿತ ಗತಿಯಲ್ಲಿ ನಡೆಯುವವು. ಪರಿಚಿತ ಸ್ತ್ರೀ ವಿರೋಧ ಎದುರಿಸಬೇಕಾಗುವುದು, ಎಚ್ಚರದಿಂದಿರಿ. ಪಶುಗಳ ವಿಕ್ರಯದಾರರಿಗೆ ಲಾಭ. ಹೊಟ್ಟೆನೋವು ಕಾಡಬಹುದು. ಮಹತ್ವದ ಮಾತುಕತೆ ಫಲಪ್ರದವಾಗಲಿವೆ. ಶುಭ: 14,18,23 ಅಶುಭ: 12,16,23.



**ಕನ್ಯಾ:** ಅನಿರೀಕ್ಷಿತ ಖರ್ಚುಗಳು ಎದುರಾಗಬಹುದು, ಹಿಡಿತವಿರಲಿ. ಸರಕಾರಿ ಕೆಲಸದಲ್ಲಿ ವ್ಯತ್ಯಯ ಕಾಣಿಸಿಕೊಳ್ಳಬಹುದು. ಆಗಬೇಕಾದ ಕೆಲಸಗಳು ನಿಧಾನಗೊಳ್ಳಬಹುದು. ಕೆಲಸಗಾರರಿಂದ ತೊಂದರೆಯಾದೀತು. ಬಂಧುಗಳಿಗೆ ಆಪತ್ತು ಎದುರಾಗುವ ಸಾಧ್ಯತೆಯಿದೆ. ಶುಭ: 16,22,26 ಅಶುಭ: 11,21,27.



**ತುಲಾ:** ಉತ್ತಮ ಫಲ ಪ್ರಾಪ್ತಿಯ ಯೋಗ, ಆಕಸ್ಮಿಕ ಧನಲಾಭ. ನಿರುದ್ಯೋಗಿಗಳಿಗೆ ಉದ್ಯೋಗ ಸಿಗುವುದು. ಸಂತತಿ ಇಲ್ಲದವರಿಗೆ ಸಂತತಿಯ ಸೂಚನೆ. ವಿವಾಹಾಪೇಕ್ಷಿಗಳಿಗೆ ಶುಭ ಸುದ್ದಿ. ಮನೆಕೆಲಸಕ್ಕೆ ಹೊಸ ಸಹಾಯಕರು ಸಿಗುವರು. ವ್ಯಾಪಾರದಲ್ಲಿ ಲಾಭ. ಕುಟುಂಬ ಸೌಖ್ಯ. ಶುಭ: 14,18,21 ಅಶುಭ: 15,19,27.



**ವೃಶ್ಚಿಕ:** ಕಷ್ಟದಲ್ಲೂ ಇಷ್ಟ ಫಲ ಪ್ರಾಪ್ತಿಯಾಗುವುದು. ವಿದೇಶ ಪ್ರವಾಸಕ್ಕೆ ಸಿದ್ಧತೆ ನಡೆಯುವುದು. ಸರಕಾರಿ ಅಧಿಕಾರ ಪ್ರಾಪ್ತಿಯೋಗ. ಶಿಕ್ಷಕರಿಗೆ ಪದೋನ್ನತಿಯೊಡನೆ ವರ್ಗಾವಣೆ ಸಂಭವ. ಕುಟುಂಬ ವರ್ಗದಲ್ಲಿ ಅನಾರೋಗ್ಯದ ಕಿರಿಕಿರಿ, ಸೂಕ್ತ ಎಚ್ಚರಿಕೆ ವಹಿಸಿ. ಶುಭ: 16,18,20 ಅಶುಭ: 12,11,27.




**ಧನು:** ಆರೋಗ್ಯದಲ್ಲಿ ಏರುಪೇರು, ಮನೆಯಲ್ಲಿ ಕಿರಿಕಿರಿ. ಕಚೇರಿ ಕಾಗದ ಪತ್ರಗಳು ಕಾಣೆಯಾಗಬಹುದು, ದೂರದಿಂದ ಶುಭವಾರ್ತೆ. ದೈನಂದಿನ ಕೆಲಸಗಳು ಸರಾಗ. ದಿಢೀರ್ ಹಿರಿಯ ಅಧಿಕಾರಿಗಳ ಆಗಮನ. ಸ್ತ್ರೀ ಮೂಲಕ ದ್ರವ್ಯ ಲಾಭ. ಮನೆಯಲ್ಲಿ ದೇವತಾ ಪೂಜೆ ನಡೆಯುವುದು. ಶುಭ: 12,16,28 ಅಶುಭ: 17,19,22.



**ಮಕರ:** ವಾಹನ ಚಲಾಯಿಸುವಾಗ ಎಚ್ಚರಿಕೆ ಇರಲಿ. ಕಾಲು ನೋವಿನ ಸಮಸ್ಯೆ. ಕಾಣಿಸಿಕೊಳ್ಳಬಹುದು. ಕೌಟುಂಬಿಕ ಖರ್ಚು ಜಾಸ್ತಿಯಾಗುವುದು. ಶತ್ರುಗಳು ತಲೆ ತಗ್ಗಿಸುವರು. ಹಳೆಯ ಮಿತ್ರರ ಆಗಮನದಿಂದ ಸಂತಸ. ಮಕ್ಕಳಿಂದ ಶುಭವಾರ್ತೆ. ದಾಂಪತ್ಯ ಸೌಖ್ಯ. ಹಣಕಾಸಿನ ಲಭ್ಯತೆ. ಶುಭ: 14,16,19 ಅಶುಭ: 15,19,24.



**ಕುಂಭ:** ಶುಭಯೋಗ. ಯಾಂತ್ರಿಕ ವಸ್ತುಗಳ ಖರೀದಿ. ಶೈಕ್ಷಣಿಕ ಖಾತೆಯಲ್ಲಿ ಕೆಲಸದಲ್ಲಿರುವವರಿಗೆ ಬಡ್ತಿ. ಬ್ಯಾಂಕ್ ನೌಕರರಿಗೆ ವರ್ಗಾವಣೆ ಸಂಭವ. ಕೈಗೊಂಡ ಕೆಲಸಗಳಲ್ಲಿ ನಿರೀಕ್ಷೆಗಿಂತ ಹೆಚ್ಚು ಲಾಭ. ಎಂಜಿನಿಯರುಗಳಿಗೆ ಉತ್ತಮ ಧನಲಾಭ. ಮಿತ್ರರಿಂದ ವಂಚನೆ, ಮಕ್ಕಳ ಅನಾರೋಗ್ಯ. ಶುಭ: 13,19,20. ಅಶುಭ: 14,16,25.



**ಮೀನ:** ವಿನಾಕಾರಣ ಮಿತ್ರರು ಶತ್ರುಗಳಾಗುವರು. ಮೇಲಧಿಕಾರಿಗಳಿಂದ ಕಿರಿಕಿರಿ. ಕಲಾವಿದರಿಗೆ ಸಂಗೀತಗಾರರಿಗೆ ತಿಂಗಳ ಮೊದಲರ್ಧ ಉತ್ತಮ. ಮಕ್ಕಳ ಆರೋಗ್ಯದಲ್ಲಿ ಕೊಂಚ ಪ್ರಗತಿ. ವಿದ್ಯಾರ್ಥಿಗಳಿಗೆ ಹಿನ್ನಡೆ. ವಾಹನ ಚಾಲಕರಿಗೆ ಎಚ್ಚರ ಅಗತ್ಯ. ಕುಟುಂಬ ಸೌಖ್ಯ. ಶುಭ: 04,10,21 ಅಶುಭ: 12,22,27.